**ಕರ್ನಾಟಕ ವಿಧಾನಸಭೆ**
**ಹದಿನಾರನೇ ವಿಧಾನಸಭೆ**
**ಏಳನೇ ಅಧಿವೇಶನ**

# ಕರ್ನಾಟಕ ನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕ, 2025
## (2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–56)

ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ಕ್ಕೆ ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ:

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ನಗರ ಪಾಲಿಕೆಗಳ (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪ್ರಕರಣ 2ರ ತಿದ್ದುಪಡಿ.-** ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ರ (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ,-

(i) (9)ನೇ ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(9ಎ) "ಪಟ್ಟಿ ಮಾಡಲಾದ ವೃತ್ತಿಪರರು" ಎಂದರೆ ವೃತ್ತಿಪರರಾದ ವಾಸ್ತುಶಿಲ್ಪಿಗಳು, ಇಂಜಿನಿಯರುಗಳು, ರಚನಾ ವಿನ್ಯಾಸ ಸಮಾಲೋಚಕರು, ಎಂಇಪಿ ಸಲಹೆಗಾರರು, ಪರಿಸರ ಸಮಾಲೋಚಕರು, ಪಟ್ಟಣ ಯೋಜಕರು ಮುಂತಾದವರು ಸಂದರ್ಭಾನುಸಾರ ಕಟ್ಟಡ ನಿರ್ಮಾಣದ ಮೊದಲು, ನಿರ್ಮಾಣದ ಸಮಯದಲ್ಲಿ ಮತ್ತು ನಂತರ ಪರಿಶೀಲಿಸಲು, ಅನುಮೋದಿತ ಯೋಜನೆಗಳ ಉಪಬಂಧಗಳನುಸಾರ ಮಾಡಲಾದ ನಿರ್ಮಾಣಗಳನ್ನು ಪ್ರಮಾಣೀಕರಿಸಲು ಮತ್ತು ಸ್ಥಳೀಯ ಪ್ರಾಧಿಕಾರಕ್ಕೆ ವರದಿ ಮಾಡಲು ಹಾಗೂ ಸರ್ಕಾರವು ಅಧಿಸೂಚಿಸಿದಂತೆ ಕೆಲವು ಕಟ್ಟಡಗಳ ಕಟ್ಟಡ ನಕ್ಷೆಗಳನ್ನು ಮಂಜೂರು ಮಾಡಲು ಸಹ ಸ್ಥಳೀಯ ಪ್ರಾಧಿಕಾರದಿಂದ ಅಧಿಕೃತಗೊಳಿಸಿದ ವ್ಯಕ್ತಿಗಳು ಎಂಬುದಾಗಿ ಪಟ್ಟಿ ಮಾಡಲಾದವರು".

(ii) ಖಂಡ (26-ಎ)ರ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

"(26-ಎಎ). "ವ್ಯಕ್ತಿ" ಎಂಬುದು ಒಬ್ಬ ವ್ಯಕ್ತಿ, ಕಂಪನಿ, ಅವಿಭಕ್ತ ಕುಟುಂಬ, ವ್ಯಕ್ತಿಗಳ ಸಂಘ ಅಥವಾ ಕಾನೂನಿನಡಿ ನಿಗಮಿತಗೊಳಿಸಿರಲಿ ಅಥವಾ ಇಲ್ಲದಿರಲಿ ವ್ಯಕ್ತಿಗಳ ನಿಕಾಯ ಮತ್ತು ಸ್ಥಳೀಯ ಪ್ರಾಧಿಕಾರಗಳು, ಕರ್ನಾಟಕ ಗೃಹ ಮಂಡಳಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ರಾಜ್ಯ ಅಥವಾ ಕೇಂದ್ರ ಸರ್ಕಾರದ ಹಾಗೂ ಕೇಂದ್ರ ಸರ್ಕಾರ ಅಥವಾ ಇತರ ರಾಜ್ಯ ಸರ್ಕಾರಗಳ ಯಾವುದೇ ಇಲಾಖೆಗಳ ಒಡೆತನ ಮತ್ತು ನಿಯಂತ್ರಣದಲ್ಲಿರುವ ಆಯಾ ಸಂಬಂಧಿತ ಶಾಸನಗಳ ಅಡಿಯಲ್ಲಿ ರಚಿಸಲಾದ ಯಾವುದೇ ಇತರ ಮಂಡಳಿಗಳು ಮತ್ತು ನಿಗಮಗಳು.

**3. ಪ್ರಕರಣ 299ರ ತಿದ್ದುಪಡಿ.-** ಮೂಲ ಅಧಿನಿಯಮದ, 299ನೇ ಪ್ರಕರಣದ, (1)ನೇ ಉಪಪ್ರಕರಣದಲ್ಲಿ, "ಕಾಮಗಾರಿಯ ತಪಶೀಲು" ಎಂಬ ಪದಗಳಿಗೆ ಮೊದಲು "ಸರ್ಕಾರವು ಅಧಿಸೂಚಿಸಿದಂಥ ಕಟ್ಟಡಗಳಿಗಾಗಿ ಲೈಸೆನ್ಸುಳ್ಳ ವೃತ್ತಿಪರರ ಸ್ವಯಂ ಪ್ರಮಾಣೀಕರಣಕ್ಕೆ ಸಂಬಂಧಿಸಿದ ದಸ್ತಾವೇಜುಗಳನ್ನು ಒಳಗೊಂಡಂತೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

**4. ಹೊಸ ಪ್ರಕರಣ 299ಎಬಿ ಸೇರ್ಪಡೆ.-** ಮೂಲ ಅಧಿನಿಯಮದ, 299-ಎ ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

**299-ಎಬಿ. ಕರಗಳು, ನಿರ್ಬಂಧಗಳು ಮತ್ತು ಷರತ್ತುಗಳ ವಿಧಿಸುವಿಕೆ.-** (1) ಆಯುಕ್ತನು, ವಲಯ ವಿನಿಯಮಗಳು ಅಥವಾ ಕಟ್ಟಡ ಉಪ-ವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿರ್ಬಂಧಗಳು ಮತ್ತು ಷರತ್ತುಗಳಿಗೆ ಒಳಪಟ್ಟು, ಭೂಮಿಯ ನಿವೇಶನ ನಕ್ಷೆ, ನೆಲ ನಕ್ಷೆ, ಕಟ್ಟಡ-ಮುಂಚಾಚುಗಳು (elevation) ಮತ್ತು ಕಟ್ಟಡದ ವಿಭಾಗಗಳೊಂದಿಗೆ ಕಾಮಗಾರಿಯನ್ನು ಕಾರ್ಯಗತಗೊಳಿಸುವಂಥ ಅನುಮತಿಯನ್ನು ಮಂಜೂರು ಮಾಡಬಹುದು ಅಥವಾ ಆತನು 303ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳಿಗೆ ಒಳಪಟ್ಟು ಅಂಥ ಲೈಸೆನ್ಸು ಮಂಜೂರು ಮಾಡುವುದನ್ನು ನಿರಾಕರಿಸಬಹುದು.

(2) ಆಯುಕ್ತನು ನಕ್ಷೆಯನ್ನು ಅನುಮೋದಿಸಲು ಅಥವಾ ಮಂಜೂರು ಮಾಡಲು ಅಥವಾ ಪ್ರಾರಂಭ ಪ್ರಮಾಣಪತ್ರ ಅಥವಾ ಅಧಿಭೋಗ ಪ್ರಮಾಣಪತ್ರವನ್ನು ನೀಡಲು, ಕರ್ನಾಟಕ ಸ್ಟಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34) ರ ಉಪಬಂಧಗಳ ಅಡಿಯಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ನಿಗದಿಪಡಿಸಿದ ಮಾರ್ಗಸೂಚಿ ಮೌಲ್ಯದ ಆಧಾರದ ಮೇಲೆ ಅಥವಾ ವಾರ್ಷಿಕ ಹೆಚ್ಚಳದೊಂದಿಗಿನ ಯಾವುದೇ ನಿಗದಿತ ದರಗಳ ಆಧಾರದ ಮೇಲೆ ನಿಯಮಗಳು ಅಥವಾ ಉಪವಿಧಿಗಳಲ್ಲಿ ನಿಯಮಿಸಬಹುದಾದಂಥ ದರಗಳಲ್ಲಿ ಈ ಮುಂದಿನ ಶುಲ್ಕವನ್ನು ವಿಧಿಸಬಹುದು ಮತ್ತು ವಸೂಲು ಮಾಡಬಹುದು, ಎಂದರೆ.-

(ಎ) ಲೈಸೆನ್ಸು ನೀಡಿಕೆಗಾಗಿ ಶುಲ್ಕ;

(ಬಿ) ಲೈಸೆನ್ಸು ಮಂಜೂರು ಮಾಡಲಾದ ಕಟ್ಟಡಕ್ಕಾಗಿ ಭದ್ರತಾ ಶುಲ್ಕ;

(ಸಿ) ನಿರ್ಮಾಣದ ಸಮಯದಲ್ಲಿ ಸಾರ್ವಜನಿಕ ರಸ್ತೆಗಳ ನಿರ್ವಹಣೆ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ನಿರ್ಮಾಣ ಸಾಮಗ್ರಿಗಳ ಶೇಖರಣೆಗಾಗಿ ಶುಲ್ಕ, ಅಂದರೆ ನೆಲ ಬಾಡಿಗೆ;

(ಡಿ) ನಿರ್ಮಾಣವು ಮಂಜೂರಾದ ಯೋಜನೆಯ ಅನುಸಾರವಾಗಿರುವುದನ್ನು ಖಚಿತಪಡಿಸಲು ಭದ್ರತಾ ಶುಲ್ಕ;

(ಇ) ಪ್ರಾರಂಭ ಪ್ರಮಾಣಪತ್ರಕ್ಕಾಗಿ ಶುಲ್ಕ;

(ಎಫ್) ಅಧಿಭೋಗ ಪ್ರಮಾಣಪತ್ರಕ್ಕಾಗಿ ಶುಲ್ಕ;

(ಜಿ) ಪ್ರಾಧಿಕಾರದ ಅಗತ್ಯತೆಗಳಿಗೆ ಸಂಬಂಧಿಸಿದಂತೆ ಪಟ್ಟಿ ಮಾಡಲಾದ ವೃತ್ತಿಪರರು ಒದಗಿಸುವ ಸೇವೆಗಳಿಗಾಗಿ ಕಟ್ಟಡಗಳ ಮಾಲೀಕರು ಭರಿಸಬೇಕಾದ ಶುಲ್ಕ.

(ಎಚ್) ನಿರ್ಮಾಣದ ಪ್ರಾರಂಭದಲ್ಲಿ ಪ್ರಾರಂಭ ಪ್ರಮಾಣ ಪತ್ರವನ್ನು ಪಡೆಯದಿದ್ದಕ್ಕಾಗಿ ಅಧಿಭೋಗ ಪ್ರಮಾಣ ಪತ್ರವನ್ನು ನೀಡುವ ಸಮಯದಲ್ಲಿ ವಿಧಿಸುವ ದಂಡ.

(ಐ) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಮಂಜೂರಾದ ನಕ್ಷೆ ಅಥವಾ ವಲಯ ನಿಯಂತ್ರಣ ಮಿತಿಗೆ ಸಂಬಂಧಿಸಿದಂತೆ ನಿರ್ಮಾಣದಲ್ಲಿನ ಉಲ್ಲಂಘನೆ ಅಥವಾ ಮಾರ್ಗ ಪಲ್ಲಟದ ವ್ಯಾಪ್ತಿಯವರೆಗೆ ಕ್ರಮಬದ್ಧಗೊಳಿಸುವುದಕ್ಕಾಗಿ ದಂಡ; ಮತ್ತು

(ಜೆ) ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅಥವಾ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದಂಥ ಇತರ ಶುಲ್ಕ."

**5. ಹೊಸ ಪ್ರಕರಣ 300ಎ ಸೇರ್ಪಡೆ.-** ಮೂಲ ಅಧಿನಿಯಮದ 300ನೇ ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**300ಎ. ನಿರ್ಮಾಣ ಚಟುವಟಿಕೆಗಳಿಗಾಗಿ ಕೆಲಸದ ಸಮಯ.-** ಧೂಳು, ಹೊಗೆ ಮತ್ತು ಶಬ್ದದಿಂದ ಉಪದ್ರವಕ್ಕೆ ಕಾರಣವಾಗದೇ ಇರುವಂತೆ ಕಟ್ಟಡಗಳು ಮತ್ತು ಕೆಲವು ರೀತಿಯ ನಿರ್ಮಾಣ ಚಟುವಟಿಕೆಗಳು ಮತ್ತು ಇತರ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಕೆಲಸದ ಸಮಯವು ನಿಯಮಗಳು ಮತ್ತು ಉಪವಿಧಿಗಳಲ್ಲಿ ನಿಯಮಿಸಬಹುದಾದಂತೆ ಇರತಕ್ಕದ್ದು. "

**6. ಪ್ರಕರಣ 301ರ ತಿದ್ದುಪಡಿ.-** ಮೂಲ ಅಧಿನಿಯಮದ, 301ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ "ಆಯುಕ್ತನು ಲಿಖಿತ ಆದೇಶದ ಮೂಲಕ ಅಂಥ ಅನುಮತಿಯನ್ನು" ಎಂಬ ಪದಗಳಿಗೆ ಮೊದಲು "ರಾಜ್ಯ ಸರ್ಕಾರವು ಅಧಿಸೂಚಿಸಿದಂಥ ಕಟ್ಟಡಗಳಿಗಾಗಿ ಲೈಸೆನ್ಸುಳ್ಳ ವೃತ್ತಿಪರರಿಂದ ಸ್ವಯಂ ದೃಢೀಕರಣದ ಆಧಾರದ ಮೇಲೆ ಮಂಜೂರು ಮಾಡಬಹುದಾದ ಅನುಮತಿಯನ್ನು ಒಳಗೊಂಡು" ಎಂಬ ಪದಗಳನ್ನು ಸೇರಿಸತಕ್ಕದ್ದು.

**7. ಪ್ರಕರಣ 423ರ ತಿದ್ದುಪಡಿ.-** ಮೂಲ ಅಧಿನಿಯಮದ, 423ನೇ ಪ್ರಕರಣದ, (9)ನೇ ಖಂಡದ (ಸಿ) ಉಪಖಂಡದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, -

"(ಸಿ) ಕೊಳಾಯಿಗಾರರಿಗೆ, ಮೋಜಣಿದಾರರಿಗೆ, ವಾಸ್ತುಶಿಲ್ಪಿಗಳಿಗೆ, ಇಂಜಿನಿಯರುಗಳಿಗೆ ಮತ್ತು ರಚನಾ ವಿನ್ಯಾಸಕಾರರಿಗೆ ಲೈಸೆನ್ಸ್ ನೀಡುವುದಕ್ಕಾಗಿ ಮತ್ತು ಲೈಸೆನ್ಸುಳ್ಳ ವಾಸ್ತುಶಿಲ್ಪಿಗಳು, ಕೊಳಾಯಿಗಾರರು ಮತ್ತು

ಯೋಜಣಿದಾರರನ್ನು ಕಡ್ಡಾಯವಾಗಿ ಕಾರ್ಯ ವಹಿಸುವುದಕ್ಕಾಗಿ ಮತ್ತು ಅವರ ಸೇವೆಗಳನ್ನು ಪಡೆಯಲು ವಿವಿಧ ವೃತ್ತಿಪರರನ್ನು ಪಟ್ಟಿ ಮಾಡಲು ಹಾಗೂ ಕಟ್ಟಡ ನಿರ್ಮಾಣದ ಮೊದಲು, ನಿರ್ಮಾಣದ ಸಮಯದಲ್ಲಿ ಮತ್ತು ನಂತರ ಕಟ್ಟಡದ ನಿವೇಶನಗಳನ್ನು ಪರಿಶೀಲಿಸಲು ಹಾಗೂ ಅನುಮೋದಿತ ನಕ್ಷೆಗಳ ಉಪಬಂಧದನುಸಾರ ಮಾಡಿದ ನಿರ್ಮಾಣಗಳನ್ನು ಪ್ರಮಾಣೀಕರಿಸಲು ಮತ್ತು ಸ್ಥಳೀಯ ಪ್ರಾಧಿಕಾರಕ್ಕೆ ವರದಿ ಮಾಡಲು ಹಾಗೂ ಸರ್ಕಾರವು ಅಧಿಸೂಚಿಸಿದ ಕೆಲವು ಕಟ್ಟಡಗಳ ಕಟ್ಟಡ ನಕ್ಷೆಗಳಿಗೆ ಅನುಮೋದನೆಯನ್ನು ಸಹ ಮಂಜೂರು ಮಾಡಲು ಮತ್ತು ಉಲ್ಲಂಘನೆಯ ಸಂಧರ್ಭದಲ್ಲಿ ಅನ್ವಯವಾಗಬಹುದಾದ ದಂಡನಾ ಉಪಬಂಧಗಳು ಮತ್ತು ಅವರ ಪಾತ್ರಗಳು ಹಾಗೂ ಹೊಣೆಗಾರಿಕೆಗಳನ್ನು ಸ್ಪಷ್ಟವಾಗಿ ಅರ್ಥೈಸುವುದಕ್ಕಾಗಿ”.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಈ ಮುಂದಿನವುಗಳಿಗಾಗಿ, ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ,-

(i) ವಾಸ್ತುಶಿಲ್ಪಿಗಳು, ಇಂಜಿನಿಯರುಗಳು, ರಚನಾ ವಿನ್ಯಾಸ ಸಲಹೆಗಾರರು, ಎಂಇಪಿ ಸಲಹೆಗಾರರು, ಪರಿಸರ ಸಲಹೆಗಾರರು, ಪಟ್ಟಣ ಯೋಜಕರು ಮುಂತಾದ ವೃತ್ತಿಪರರು, ಅವರು ಕಟ್ಟಡ ನಿರ್ಮಾಣದ ಮೊದಲು, ನಿರ್ಮಾಣದ ಸಮಯದಲ್ಲಿ ಮತ್ತು ನಂತರ ಪರಿಶೀಲಿಸಲು, ಅನುಮೋದಿತ ಯೋಜನೆಗಳ ಉಪಬಂಧಗಳ ಪ್ರಕಾರ ಮಾಡಿದ ನಿರ್ಮಾಣಗಳನ್ನು ಪ್ರಮಾಣೀಕರಿಸಲು ಮತ್ತು ಸ್ಥಳೀಯ ಪ್ರಾಧಿಕಾರಕ್ಕೆ ವರದಿ ಮಾಡಲು ಮತ್ತು ಸರ್ಕಾರವು ಅಧಿಸೂಚಿಸಿದಂತೆ ಕೆಲವು ಕಟ್ಟಡಗಳ ಕಟ್ಟಡ ಯೋಜನೆಗಳನ್ನು ಮಂಜೂರು ಮಾಡಲು ಸ್ಥಳೀಯ ಪ್ರಾಧಿಕಾರದಿಂದ ಅಧಿಕೃತಗೊಳಿಸಿದ ವ್ಯಕ್ತಿಗಳನ್ನಾಗಿ ಪಟ್ಟಿ ಮಾಡಲು ಪಾಲಿಕೆಗಳಿಗೆ ಉಪಬಂಧಗಳನ್ನು ಪರಿಚಯಿಸಲು;

(ii) ಜಾರಿಯಲ್ಲಿರುವ ಕಟ್ಟಡ ಉಪವಿಧಿಗಳ ಅಥವಾ ಯಾವುದೇ ಅಧಿನಿಯಮದ ಉಪಬಂಧಗಳ ಅನುಸಾರವಾಗಿ ಸಕ್ರಮಗೊಂಡಂಥ ಕಾನೂನುಬಾಹಿರ ಕಟ್ಟಡಗಳಿಗೆ ಮಾತ್ರ ದಂಡವನ್ನು ವಿಧಿಸುವುದು ಹಾಗೂ ಕೆಡವುದಕ್ಕಾಗಿ ಆದೇಶಿಸಲಾಗಿರುವ ಕಟ್ಟಡಗಳಿಗಾಗಿ ದಂಡವನ್ನು ವಿಧಿಸದೇ ಇರಲು ಅಸ್ತಿತ್ವದಲ್ಲಿರುವ ಅಧಿನಿಯಮದ ಉಪಬಂಧವನ್ನು ನಿರ್ಬಂಧಿಸಲು;

(iii) ಸ್ವಯಂ ಪ್ರಮಾಣೀಕರಣದ ಮೂಲಕ ಕಟ್ಟಡ ನಿರ್ಮಾಣಕ್ಕಾಗಿನ ಮಂಜೂರಾತಿಯ ಅನುಮೋದನೆಯನ್ನು ಒಳಗೊಳ್ಳಲು;

(iv) ಮಾಲೀಕರಿಂದ ಪಟ್ಟಿ ಮಾಡಲಾದ ವೃತ್ತಿಪರರು ಶುಲ್ಕವನ್ನು ಸಂಗ್ರಹಿಸುವುದನ್ನು ಒಳಗೊಂಡಂತೆ ಕರಗಳನ್ನು ವಿಧಿಸಲು ಪಾಲಿಕೆಗಾಗಿ ಉಪಬಂಧಗಳನ್ನು ಕಲ್ಪಿಸಲು;

(v) ಕಟ್ಟಡ ಲೆಸೆನ್ಸನ್ನು ಹಿಂಪಡೆದ ಸಂದರ್ಭದಲ್ಲಿ ಶುಲ್ಕವನ್ನು ಮರುಪಾವತಿಸಲು;

(vi) ಪಾಲಿಕೆಯು ಅನುಮತಿಯನ್ನು ನೀಡುವ ಮೊದಲೇ ನಿರ್ಮಾಣಗಳನ್ನು ಪ್ರಾರಂಭಿಸಿರುವುದಕ್ಕಾಗಿ ಅನುಮತಿಯನ್ನು ನೀಡಲು ಹಾಗೂ ನಿಯಮಗಳು ಅಥವಾ ಉಪವಿಧಿಗಳಲ್ಲಿ ನಿಯಮಿಸಲಾದಂತೆ ದಂಡಗಳನ್ನು ವಿಧಿಸುವ ಮೂಲಕ ಅನ್ವಯವಾಗಬಹುದಾದ ಕಾನೂನುಗಳ ಅನುಸಾರ ನಿರ್ಮಾಣವನ್ನು ಕೈಗೊಳ್ಳಲು; ಮತ್ತು

(vii) ಸಾಮಾನ್ಯ ಕೆಲಸದ ಅವಧಿಗೆ ಮೀರಿದ ಕೆಲವು ವಿಧಧ ಅನುಮತಿಸಲಾದ ನಿರ್ಮಾಣಗಳಿಗೆ ಅನುಮತಿಯನ್ನು ನೀಡಲು .

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಬಿ. ಎಸ್. ಸುರೇಶ**
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

## ಅನುಬಂಧ

## ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ರ

## (1977ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ಉದ್ಧೃತ ಭಾಗ

**XXX XXX XXX**

**299. ಕಟ್ಟಡದ ನಿರ್ಮಾಣ ಅಥವಾ ಪುನರ್ ನಿರ್ಮಾಣಕ್ಕೆ ಅರ್ಜಿ.-** (1) ಯಾರೇ ವ್ಯಕ್ತಿಯು, ಕಟ್ಟಡವನ್ನು ನಿರ್ಮಿಸಲು ಅಥವಾ ಪುನರ್ ನಿರ್ಮಿಸಲು ಉದ್ದೇಶಿಸಿದರೆ, ಅವನು ಕಾಮಗಾರಿಯನ್ನು ನಿರ್ವಹಿಸಲು ಅನುಮತಿಗಾಗಿ ಲಿಖಿತ ಅರ್ಜಿಯನ್ನು, ಭೂಮಿಯ ನಿವೇಶನ ಸ್ಥಳದ ನಕ್ಷೆ, ನೆಲನಕ್ಷೆ, ಕಟ್ಟಡದ ಹೊರನೋಟ ನಕ್ಷೆಗಳು ಮತ್ತು ಖಂಡ ಚಿತ್ರಗಳು, ಕಾಮಗಾರಿಯ ತಪಶೀಲು ಮತ್ತು ನಿಯಮಿಸಬಹುದಾದಂಥ ಇತರ ದಸ್ತಾವೇಜುಗಳೊಂದಿಗೆ ಕಳುಹಿಸತಕ್ಕದ್ದು.

**301. ಕಾಮಗಾರಿಯನ್ನು ನಿರ್ವಹಿಸಲು ಆಯುಕ್ತರು ಯಾವ ಅವಧಿಯೊಳಗೆ ಅನುಮತಿಯನ್ನು ಕೊಡಬಹುದೋ ಅಥವಾ ಅನುಮತಿಯನ್ನು ನಿರಾಕರಿಸಬಹುದೋ ಆ ಅವಧಿ.-** (1) ಯಾವುದೇ ಕಾಮಗಾರಿಯನ್ನು ನಿರ್ವಹಿಸಲು ಅನುಮತಿಗಾಗಿ 299ನೇ ಪ್ರಕರಣದ ಮೇರೆಗೆ ಸಲ್ಲಿಸಿದ ಯಾವುದೇ ಅರ್ಜಿಯನ್ನು ನಿಯಮಗಳ ಅಥವಾ ಉಪವಿಧಿಗಳ ಮೇರೆಗೆ ಅಗತ್ಯಪಡಿಸಿದ ಯಾವುದೇ ಮಾಹಿತಿಯನ್ನು ಅಥವಾ ದಸ್ತಾವೇಜುಗಳನ್ನು ಅಥವಾ ಯಾವುದೇ ಹೆಚ್ಚಿನ ಮಾಹಿತಿಯನ್ನು ಅಥವಾ ದಸ್ತಾವೇಜುಗಳನ್ನು ಸ್ವೀಕರಿಸಿದ ತರುವಾಯ ಮೂವತ್ತು ದಿವಸಗಳೊಳಗಾಗಿ ಆಯುಕ್ತರು ಲಿಖಿತ ಆದೇಶದ ಮೂಲಕ ಅಂಥ ಅನುಮತಿಯನ್ನು ನೀಡತಕ್ಕದ್ದು ಅಥವಾ 303ನೇ ಪ್ರಕರಣದಲ್ಲಿ ಅಥವಾ 304ನೇ ಪ್ರಕರಣಗಳಲ್ಲಿ ತಿಳಿಸಿದ ಒಂದು ಅಥವಾ ಹೆಚ್ಚು ಕಾರಣಗಳ ಮೇಲೆ ಅನುಮತಿಯನ್ನು ನೀಡಲು ನಿರಾಕರಿಸತಕ್ಕದ್ದು.

**XXX XXX XXX**

**423. ಉಪವಿಧಿಗಳನ್ನು ರಚಿಸಲು ಅಧಿಕಾರ.-** ಈ ಅಧಿನಿಯಮದ ಉಪಬಂಧಗಳಿಗೆ, ನಿಯಮಗಳಿಗೆ ಮತ್ತು ವಿನಿಯಮಗಳಿಗೆ ಒಳಪಟ್ಟು, ನಗರಪಾಲಿಕೆಯು,-

**XXX XXX XXX**

(9) (ಎ) ಕಟ್ಟಡದ ಬಗ್ಗೆ ವಿನಿಯಮಿಸುವುದಕ್ಕಾಗಿ;

(ಬಿ) ಕಟ್ಟಡವನ್ನು ಕಟ್ಟುವುದಕ್ಕಾಗಿ ಸಲ್ಲಿಸುವ ಅರ್ಜಿಗಳೊಂದಿಗೆ ಯಾವ ಮಾಹಿತಿಯನ್ನು ಮತ್ತು ನಕ್ಷೆಗಳನ್ನು ಒದಗಿಸಬೇಕು ಎಂಬುದನ್ನು ನಿರ್ಧರಿಸುವುದಕ್ಕಾಗಿ;

(ಸಿ) ಕೊಳಾಯಿಗಾರರಿಗೆ, ಮೋಜಣಿದಾರರಿಗೆ, ವಾಸ್ತುಶಿಲ್ಪಿಗಳಿಗೆ, ಇಂಜಿನಿಯರುಗಳಿಗೆ ಮತ್ತು ರಚನಾ ವಿನ್ಯಾಸಕಾರರಿಗೆ ಲೈಸೆನ್ಸ್ ಕೊಡುವುದಕ್ಕಾಗಿ ಮತ್ತು ಲೈಸೆನ್ಸ್ ಪಡೆದ ವಾಸ್ತುಶಿಲ್ಪಿಗಳು, ಕೊಳಾಯಿಗಾರರು ಮತ್ತು ಮೋಜಣಿದಾರರನ್ನು ಕಡ್ಡಾಯವಾಗಿ ನೇಮಕ ಮಾಡಿಕೊ ದಕ್ಕಾಗಿ;

**XXX XXX XXX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾಸೂ , ಪ್ರತಿಗಳು 500+100+20, 12ನೇ ಆಗಸ್ಟ್ 2025

**KARNATAKA LEGISLATIVE ASSEMBLY**
**SIXTEENTH LEGISLATIVE ASSEMBLY**
**SEVENTH SESSION**

# THE KARNATAKA MUNICIPAL CORPORATIONS (AMENDMENT) BILL, 2025

**(LA Bill No. 56 of 2025)**

A Bill to further amend the Karnataka Municipal Corporations Act, 1976.

Whereas, it is expedient further to amend the Karnataka Municipal Corporations Act, 1976 (Karnataka Act No 14 of 1977) for the purpose herein after appearing;

Be it enacted by the Karnataka State Legislature in the seventy sixth year of the republic of India as follows:-

**1. Short title and commencement**.- (1) This Act may be called the Karnataka Municipal Corporations (Amendment) Act, 2025.

(2) It shall come into force at once.

**2. Amendment of section 2.-** In the Karnataka Municipal Corporations Act, 1976 (Karnataka Act No 14 of 1977) (herein after referred to as the Principal Act), in section 2,-

(i) after clause (9), the following shall be inserted, namely:-

"(9-A) "Empanelled professional" means professionals such as Architects, Engineers, Structural consultants, MEP consultants, Environment consultants, Town Planners etc., who are empanelled by the Local Authority as authorized persons to inspect the building sites before, during and after construction as the case may be, to certify the constructions made as per the provisions of the approved plans and report to the Local Authority and also to sanction building plans of certain buildings as notified by the Government."

(ii) after clause (26-A), the following shall be inserted, namely:-

"(26-AA) "Person" includes an individual, a company, an undivided family, an association of persons or a body of individuals, whether incorporated or not under law and includes local authorities, Karnataka Housing Board, Karnataka

Industrial Area Development Board, any other Boards and Corporations constituted under respective statutes owned and controlled by the State or the Central Government and any departments of the Central Government or other State Governments."

**3. Amendment of section 299.-** In the Principal Act, in section 299, in sub-section (1), after the words "specification of the work", the words "including documents related to self-certification of the licensed professionals for such buildings as notified by the Government" shall be inserted.

**4. Insertion of new section 299-AB.-** In the Principal Act, after section 299-A, the following shall be inserted, namely:-

**"299-AB. Levy of imposts, restrictions and conditions.-** (1) The Commissioner may grant such permission to execute the work together with a site plan of the land, ground plan, elevations and section of the building subject to such restrictions and conditions, as may be specified in the zoning regulations or building bye-laws or he may refuse to grant such license subject to the conditions specified in section 303.

(2) The Commissioner may for approving or sanctioning the plan or grant of commencement certificate or occupation certificate, charge and levy the following fee at such rates as may be prescribed in the rules or bye-laws, based on the guidance value fixed by the Department of Stamps and Registration under the provisions of the Karnataka Stamp Act, 1957 (Karnataka Act 34 of 1957) or based on any fixed charges with annual increment, namely:-

(a) fee for issuance of license;
(b) fee for security of the building for which license granted;
(c) fee for maintenance of public roads or storing of construction materials in public places during construction viz, ground rent;
(d) security fee, ensuring that the construction is in accordance with plan sanctioned;
(e) fee for commencement certificate;
(f) fee for occupancy certificate;
(g) fee for services rendered by Empanelled Professionals in connection to the Authority's requirements, to be borne by the owners of buildings.

(h) penalty imposed at the time of issuance of occupancy certificate for not obtaining commencement certificate at the commencement of the construction;

(i) penalty for regularization up to the extent of violation or deviation in the construction with respect to sanctioned plan or zonal regulation limit, as may be specified in the bye-laws; and

(j) such other fee as specified in the bye-laws or as specified by the Government from time to time."

**5. Insertion of new section 300-A.-** In the Principal Act, after section 300, the following shall be inserted, namely:-

**"300-A. Working Hours for construction activities.–** The working hours for undertaking certain kinds of construction activities of buildings and other developments which do not cause nuisance from dust smoke and noise shall be such as may be prescribed in the rules or bye-laws."

**6. Amendment of section 301.-** In the Principal Act, in section 301, in sub-section (1), after the words "the commissioner shall, by written order, either grant such permission", the words "including the permission that may be granted based on self-certification from the licensed professional for such buildings as notified by the Government" shall be inserted.

**7. Amendment of section 423.-** In the Principal Act, in section 423, in clause (9), for sub-clause (c), the following shall be substituted, namely:-

"(c) for the licensing of plumbers, surveyors, architects, engineers and structural designers and for the compulsory employment of licensed architects, plumbers and surveyors and for empanelling various professionals to avail their services to inspect the building sites before, during and after construction and to certify the constructions made are as per the provisions of the approved plans and report to the Local Authority and also to sanction building plans of certain buildings as notified by the Government and to clearly define their roles, responsibilities, and the penal provisions applicable in cases of violation."

## STATEMENT OF OBJECTS AND REASONS

It is considered necessary further to amend the Karnataka Municipal Corporations Act, 1976 (Karnataka Act No 14 of 1977) to,-

(i) introduce the provisions for the Corporations to empanel professionals such as Architects, Engineers, Structural consultants, MEP consultants, Environment consultants etc. who are empanelled by the Local Authority as authorized persons to inspect the building sites before, during and after construction as the case may be, to certify the constructions made as per the provisions of the approved plans and report to the Local Authority and also to sanction building plans of certain buildings as notified by the Government;

(ii) restrict the existing provision in the Act to levy penalty for only such unlawful buildings that can be regularised as per the provisions of the building byelaws or any Act in force and not for buildings that have been ordered for demolition;

(iii) include approvals to be granted for building construction through self-certification;

(iv) make provisions for Corporation to levy imposts including collecting fee for empanelled professionals from the owners;

(v) refund the fee in case of withdrawal of building license;

(vi) grant permissions for constructions that have begun before the permission is granted by the Corporation and construction are carried out in accordance with applicable laws by levying penalty as prescribed in the rules or bye-laws; and

(vii) permit certain kinds of constructions to be permitted beyond the normal working hours.

Hence, the Bill.

## FINANCIAL MEMORANDUM

There is no extra expenditure involved in the proposed Legislative Measure.

**B. S. SURESHA**
Minister for Urban Development
and Urban Planning

**M.K. VISHALAKSHI**
Secretary
Karnataka Legislative Assembly

**ANNEXURE**

**THE EXTRACT FROM THE KARNATAKA MUNICIPAL CORPORATIONS ACT, 1976**

**(KARNATAKA ACT 14 OF 1977)**

**X X XX XX**

**299. Application to construct or re-construct building.-** (1) If any person intends to construct or re-construct a building, he shall send to the Commissioner an application in writing for permission to execute the work together with a site plan of the land, ground-plan, elevations and sections of the building, a specification of the work and such other documents as may be prescribed

**X X XX XX**

**301. Period within which Commissioner is to grant or refuse to grant permission to execute work.-** (1) Within thirty days after the receipt of any application made under section 299 for permission to execute any work or of any information or of documents or further information or documents required under rules or bye-laws the Commissioner shall, by written order, either grant such permission or refuse on one or more of the grounds mentioned in section 303 or section 304 to grant it.

**X X XX XX**

**423. Power to make bye-laws.-** Subject to the provisions of this Act, the rules and regulations, the corporation may make bye-laws,-

**X X XX XX**

(9) (a) for the regulation of building;

(b) for determining the information and plans to be submitted with applications to build;

(c) for the licensing of plumbers, surveyors, architects, engineers and structural designers and for the compulsory employment of licensed architects, plumbers and surveyors;

**X X XX XX**

Govt. Press, Vikasa Soudha, Bengalur, 11th August, 2025, P7, W.D. , Copies 500+100+20